**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ/21/ಎಸಿಎ0 (2)/2013-14

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು - 560 001,
ದಿನಾಂಕ: 24-05-2013.

**-:: ಪ್ರವೇಶಾಧಿಸೂಚನೆ ::-**

**ವಿಷಯ:** ಖಾಸಗಿ ಪಾಲಿಟೆಕ್ನಿಕ್‌ಗಳ 2013-14ನೇ ಸಾಲಿನ ಪ್ರಥಮ ಸಂಜೆ ಡಿಪ್ಲೋಮಾ (ಪಾರ್ಟ್-ಟೈಂ) ಕೋರ್ಸ್‌ಗಳಿಗೆ ಪ್ರವೇಶ ನೀಡುವಾಗ ಅನುಸರಿಸಬೇಕಾದ ಸೂಚನೆಗಳು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂ: ಇಡಿ 114 ಟಿಪಿಇ 87, ದಿ: 20/07/1987.
2. ಸರ್ಕಾರದ ಅಧಿಸೂಚನೆ ಸಂ: ಎಸ್‌ಡಬ್ಲ್ಯೂಡಿ 3 ಎಸ್‌ಟಿಸಿ 2002, ದಿನಾಂಕ: 11/03/2002 (ಮೀಸಲಾತಿಗೆ ಸಂಬಂಧಿಸಿದಂತೆ)
3. ಸರ್ಕಾರದ ಆದೇಶ ಸಂ: ಇಡಿ 195 ಟಿಪಿಇ 2003, ದಿ: 07/06/2003, (ಸೆಮಿಸ್ಟರ್ ಪದ್ಧತಿ ಜಾರಿಗೆ ಸಂಬಂಧಿಸಿದಂತೆ)
4. ಸರ್ಕಾರದ ಆದೇಶ ಸಂ: ಇಡಿ 119 ಟಿಪಿಇ 2005, ದಿ: 18/10/2005 (ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ)
5. ಸರ್ಕಾರದ ಆದೇಶ ಸಂ: ಇಡಿ 106 ಟಿಪಿಇ 2005, ದಿನಾಂಕ: 06/05/2005 & ಇಡಿ/99/ಟಿಪಿಇ/2011, ದಿ:29-04-2011. (ಕನಿಷ್ಟ ವಿದ್ಯಾರ್ಹತೆಗೆ ಸಂಬಂಧಿಸಿದಂತೆ)

-000000-

2013-14ನೇ ಸಾಲಿನ ಪ್ರಥಮ ಸಂಜೆ ಡಿಪ್ಲೋಮಾ (ಪಾರ್ಟ್ ಟೈಂ) ಪ್ರವೇಶಕ್ಕೆ ಸಂಬಂಧಿಸಿದಂತೆ ಕೆಳಕಂಡ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಎ.ಐ.ಸಿ.ಟಿ.ಇ ಮತ್ತು ಉಲ್ಲೇಖ(1)ರಲ್ಲಿ ನಮೂದಿಸಿರುವ ಸರ್ಕಾರಿ ಆದೇಶದಲ್ಲಿನ ಪ್ರವೇಶ ನಿಯಮಗಳನ್ನು ಹಾಗೂ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, 3 1/2 (ಮೂರು ವರ್ಷ ಆರು ತಿಂಗಳು) ವರ್ಷದ ಅವಧಿಯ ಪ್ರಥಮ ಸೆಮಿಸ್ಟರ್ (1 1/2 ವರ್ಷ) ಪಾರ್ಟ್ ಟೈಂ ಡಿಪ್ಲೋಮಾ ಕೋರ್ಸ್‌ಗೆ ದಿನಾಂಕ: **29/06/2013**ರ ಒಳಗೆ ಪ್ರವೇಶ ನೀಡತಕ್ಕದ್ದು. ನಿಯಮಗಳನ್ನು ಮೀರಿ ಮಾಡಿಕೊಂಡಂತಹ ಪ್ರವೇಶಗಳನ್ನು ಅನುಮೋದಿಸಲಾಗುವುದಿಲ್ಲ.

1) ಆಕ್ಸ್‌ಫರ್ಡ್ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು
2) ನಾಡಿಗಿರ್ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು
3) ಪಿ.ಇ.ಎಸ್ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು.
4) ಸಂಜಯ್ ಗಾಂಧಿ (ಸಂಜೆ) ಪಾಲಿಟೆಕ್ನಿಕ್, ಬಳ್ಳಾರಿ.

**ಪ್ರಥಮ ಸಂಜೆ ಡಿಪ್ಲೋಮಾ ಪ್ರವೇಶಕ್ಕೆ ನಿಗದಿಪಡಿಸಲಾಗಿರುವ ಕನಿಷ್ಠ ವಿದ್ಯಾರ್ಹತೆ:**

| ಮೀಸಲಾತಿ | ಇಂಜಿನಿಯರಿಂಗ್ ಕೋರ್ಸುಗಳಿಗೆ |
|---|---|
| ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಅನ್ವಯವಾಗುವಂತೆ | ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕಡ್ಡಾಯವಾಗಿ ಒಟ್ಟಾರೆ ಶೇ. 35 ಪಡೆದು ಉತ್ತೀರ್ಣರಾಗಿರಬೇಕು. |

**2. ಪ್ರವೇಶಕ್ಕೆ ಇರಬೇಕಾದ ಕನಿಷ್ಠ ಅರ್ಹತೆ:-**

1. ಅಭ್ಯರ್ಥಿಯು ಸರ್ಕಾರದಿಂದ ಮಾನ್ಯತೆ ಪಡೆದ ಕರ್ನಾಟಕದಲ್ಲಿನ ಯಾವುದೇ ಶಿಕ್ಷಣಾಲಯದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನಿಷ್ಟ 05 ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕು.
2. ಅಭ್ಯರ್ಥಿಯು ಬೆಂಗಳೂರು ಅಥವಾ ಸುತ್ತ ಮುತ್ತಲು ಇರುವ ಅಂದರೆ (within urban agglomeration of the city in which the profession institution is situated). ಯಾವುದೇ ಸರ್ಕಾರದ/ಸರ್ಕಾರದಿಂದ ಮಾನ್ಯತೆ ಪಡೆದ ಕೈಗಾರಿಕೆ/ಕಾರ್ಖಾನೆ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ತಾಂತ್ರಿಕ ಸಂಸ್ಥೆಯಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆಯ ನಂತರ ಸಂಬಂಧಪಟ್ಟ ಶಾಖೆಯಲ್ಲಿ (TRADE) ಕನಿಷ್ಠ 03 ವರ್ಷಗಳ ಸೇವಾ ಅನುಭವದೊಂದಿಗೆ ಕಾರ್ಯ ನಿರ್ವಹಿಸುತ್ತಿರಬೇಕು.
3. ಅಭ್ಯರ್ಥಿಯು ಮೀಸಲಾತಿಯ ಸೌಲಭ್ಯ ಪಡೆಯಲು, ಅಭ್ಯರ್ಥಿ ಹಾಗೂ ಅಭ್ಯರ್ಥಿಯ ಪಾಲಕರು ಕರ್ನಾಟಕದ ಶಾಶ್ವತ ನಿವಾಸಿಯಾಗಿರಬೇಕು.
4. ಹೊರ ರಾಜ್ಯದಿಂದ ಕರ್ನಾಟಕ ರಾಜ್ಯಕ್ಕೆ ವಲಸೆ ಬಂದಿರುವ ಅಭ್ಯರ್ಥಿಗಳು/ಪಾಲಕರು ಮೀಸಲಾತಿಯನ್ನು ಕರ್ನಾಟಕದಲ್ಲಿ ಪಡೆಯಲು ಅರ್ಹರಾಗಿರುವುದಿಲ್ಲ.
5. ಶಾಶ್ವತ ನಿವಾಸಿ ಎಂದು ಧೃಢಪಡಿಸಲು ಅಭ್ಯರ್ಥಿಯು ಆಯಾ ಪ್ರದೇಶದ ತಹಶೀಲ್ದಾರ್‌ರವರ ಕಛೇರಿಯಿಂದ ಡೊಮಿಸಲ್ ಸರ್ಟಿಫಿಕೇಟನ್ನು ಪಡೆದು ಸಲ್ಲಿಸಬೇಕು. ಡೊಮಿಸಲ್ ಪ್ರಮಾಣ ಪತ್ರದಲ್ಲಿ ಅಭ್ಯರ್ಥಿಯ ಪೂರ್ಣ ವಿಳಾಸ (ಮನೆ ನಂಬರ್ ಸಹಿತ) ವನ್ನು ಹೊಂದಿರತಕ್ಕದ್ದು; ಹಾಗೂ 5 ವರ್ಷದ ವ್ಯಾಸಂಗ ಪ್ರಮಾಣ ಪತ್ರ ನೀಡಿದ ಸಂಸ್ಥೆಯು ಮಾನ್ಯತೆ ಪಡೆದಿರುವ ಬಗ್ಗೆ ಬ್ಲಾಕ್ ಶಿಕ್ಷಣಾಧಿಕಾರಿಯವರು (ಬಿಇಓ) ಮೇಲು ಸಹಿ ಮಾಡಿರಬೇಕು.

**3. ಪ್ರವೇಶ ಸಂಖ್ಯೆಯ ಮಿತಿಯೊಳಗೆ (ಇಂಟೇಕ್) ಹಾಗೂ ಮಾನ್ಯತೆ ಪಡೆದ ಕೋರ್ಸಿಗೆ ಪ್ರವೇಶ ನೀಡುವ ಬಗ್ಗೆ:-**

2013-2014ನೇ ಸಾಲಿನ ಪ್ರವೇಶವು ಎ.ಐ.ಸಿ.ಟಿ.ಇ ಮತ್ತು ಸರ್ಕಾರ ನಿಗಧಿಪಡಿಸಲಾಗಿರುವ ಕೋರ್ಸು ಮತ್ತು ಪ್ರವೇಶ ಸಂಖ್ಯೆಯ ಮಿತಿಯೊಳಗೆ ಇರತಕ್ಕದ್ದು. ಆದಾಗ್ಯೂ ಸಂಬಂಧಿಸಿದ ಈ ಪ್ರವೇಶವು ಪಾಲಿಟೆಕ್ನಿಕ್‌ನ ಇನ್‌ಟೇಕ್ ನಿಗದಿಯಲ್ಲಿ ಬದಲಾವಣೆ ಅಥವಾ ಮಾರ್ಪಾಡು ಆದ ಪಕ್ಷದಲ್ಲಿ ಪ್ರವೇಶ ಸಂಖ್ಯೆಯನ್ನು ಸರಿದೂಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ಸರ್ಕಾರದ ಆದೇಶ ಮತ್ತು ಎ.ಐ.ಸಿ.ಟಿ.ಇ.ಯ ಪೂರ್ವಾನುಮತಿ ಇಲ್ಲದ ಹೊಸ ಕೋರ್ಸುಗಳಿಗೆ ಪ್ರವೇಶ ಮತ್ತು ಪ್ರವೇಶ ಮರುಹೊಂದಾಣಿಕೆಗೂ ಅವಕಾಶವಿರುವುದಿಲ್ಲ. ಅಲ್ಲದೆ ನಿಯಮಗಳನ್ನು ಮೀರಿ ಪ್ರವೇಶ ಮಾಡಿಕೊಳ್ಳಲಾದ ಅಭ್ಯರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ. ಇದಕ್ಕೆ ಆಯಾ ಸಂಸ್ಥೆಯ ಪ್ರಿನ್ಸಿಪಾಲರು ಮತ್ತು ಆಡಳಿತ ಮಂಡಳಿಯವರೇ ಸಂಪೂರ್ಣ ಜವಾಬ್ದಾರರಾಗುತ್ತಾರೆ.

**4. ರಿಪೀಟರ್ ಪ್ರವೇಶ:-**

ಪ್ರವೇಶ ನಿಯಮಗಳು 1987ರ ನಿಯಮ 2(ಹೆಚ್) ರಲ್ಲಿನ ನಿಯಮಗಳನ್ನು ಅನುಸರಿಸಿ, ನಿಯಮ 5ರ ಟಿಪ್ಪಣಿ 4ರ ಪ್ರಕಾರ ಪ್ರತಿ ಕೋರ್ಸಿನ ಪ್ರವೇಶ ಸಂಖ್ಯೆಯ ಶೇಕಡ 10 ರಷ್ಟು ಸ್ಥಾನಗಳಿಗೆ ಮಾತ್ರ ಅರ್ಹ ಅಭ್ಯರ್ಥಿಗಳನ್ನು ರಿಪೀಟರ್ ಆಗಿ ಪ್ರವೇಶ ಮಾಡಿಕೊಳ್ಳಬಹುದಾಗಿರುತ್ತದೆ. ಈ ರಿಪೀಟರ್ ಪ್ರವೇಶಕ್ಕೆ ಆಯಾ ವರ್ಷದ ಸೆಮಿಸ್ಟರ್‌ಗೆ ಅನ್ವಯವಾಗುವಂತೆ ಒಂದು ಬಾರಿಗೆ ಮಾತ್ರ ಅವಕಾಶವಿರುತ್ತದೆ. ಈ ಅಭ್ಯರ್ಥಿಗಳ ಪ್ರವೇಶಾನುಮೋದನೆಗೆ ಸಂಬಂಧಿಸಿದಂತೆ ಕೆಳಕಂಡ ದಾಖಲೆಗಳನ್ನು ಅನುಮೋದನೆಗೆ ಸಲ್ಲಿಸತಕ್ಕದ್ದು.

1. ರಿಪೀಟರ್ ಆಗಿ ಪ್ರವೇಶ ಪಡೆದ ಅಭ್ಯರ್ಥಿಗಳ ಸಂಬಂದದಲ್ಲಿ ಹಿಂದಿನ ಸಾಲಿನಲ್ಲಿ ಪ್ರವೇಶಾನುಮೋದನೆ ಪಡೆದಿರುವ ದಾಖಲೆ ಪ್ರತಿ.
2. ರಿಪೀಟರ್ ಅಭ್ಯರ್ಥಿಗಳ ಪ್ರವೇಶದ ಪಟ್ಟಿಯನ್ನು ಪ್ರತ್ಯೇಕವಾಗಿ ತಯಾರಿಸಿ ಅನುಮೋದನೆಗೆ ಸಲ್ಲಿಸುವುದು.

6. . <u>ಕರ್ನಾಟಕದ ಅಭ್ಯರ್ಥಿಗಳಿಗೆ ಪ್ರವೇಶಾದ್ಯತೆ ಬಗ್ಗೆ:</u>

ಉಲ್ಲೇಖ(1)ರಲ್ಲಿ ನಮೂದಿಸಿರುವ ಸರ್ಕಾರಿ ಆದೇಶದಲ್ಲಿನ ಸೂಚನೆಗಳನ್ವಯ ಪ್ರತಿ ಕೋರ್ಸಿಗೆ ನಿಗಧಿಯಾದ ಸ್ಥಾನಗಳಿಗೆ ಶೇಕಡ ೮೦ ರಷ್ಟು ಸ್ಥಾನಗಳನ್ನು ಕರ್ನಾಟಕದ ಅಭ್ಯರ್ಥಿಗಳಿಗೆ ಕಡ್ಡಾಯವಾಗಿ ಪ್ರವೇಶ ನೀಡತಕ್ಕದ್ದು. ಉಳಿದ ಶೇಕಡ ೨೦ ರಷ್ಟು ಸ್ಥಾನಗಳನ್ನು ಮಾತ್ರ ಹೊರ ರಾಜ್ಯದ ಅಭ್ಯರ್ಥಿಗಳಿಗೆ ನೀಡಬಹುದಾಗಿದೆ.

**<u>6 (ಅ). ಕರ್ನಾಟಕ ಅಭ್ಯರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯದೆ ಇರುವ ಬಗ್ಗೆ ಈ ಕುರಿತು ತೆಗೆದುಕೊಂಡಿರುವ ಕ್ರಮದಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ (ಉದಾ: ಪತ್ರಿಕಾ ಪ್ರಕಟಣೆ ಇತ್ಯಾದಿ) ನಿರ್ದೇಶನಾಲಯಕ್ಕೆ ಮುಂಚಿತವಾಗಿ ಲಿಖಿತ ರೂಪದಲ್ಲಿ ತಿಳಿಸಿ, ನಿರ್ದೇಶಕರ ಪೂರ್ವಾನುಮತಿ ಪಡೆದು ಹೊರ ರಾಜ್ಯದ ಅಭ್ಯರ್ಥಿಗಳಿಗೆ ಪ್ರವೇಶ ನೀಡಬಹುದಾಗಿದೆ. ಆದಾಗ್ಯೂ, ಇದನ್ನೇ ಉದಾಹರಣೆಯಾಗಿ ತೆಗೆದುಕೊಂಡು ಹೊರರಾಜ್ಯದ ಅಭ್ಯರ್ಥಿಗಳಿಗೆ ಪ್ರವೇಶ ನೀಡಬಹುದೆಂದು ಹಕ್ಕು ಚಲಾಯಿಸುವಂತಿಲ್ಲ.</u>**

ಪ್ರತಿ ಕೋರ್ಸಿನಲ್ಲಿ ಮಂಜೂರಾದ ಸ್ಥಾನಗಳಲ್ಲಿ ಶೇಕಡ ೨೦ಕ್ಕಿಂತಲೂ ಹೆಚ್ಚು ಹೊರ ರಾಜ್ಯದ ಅಭ್ಯರ್ಥಿಗಳಿಗೆ ಪ್ರವೇಶ ನೀಡಿದ ಸಂಬಂಧದಲ್ಲಿ ಮೇಲಿನಂತೆ ಕ್ರಮ ಜರುಗಿಸದೆ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ನಿಯಮಗಳ ಪ್ರಕಾರ ಪರಿಗಣಿಸಲಾಗುವುದಿಲ್ಲ. ಅಲ್ಲದೆ ಇದರಿಂದ ಉದ್ಭವಿಸಬಹುದಾದ ಪರಿಣಾಮಗಳಿಗೆ ಆಯಾ ಸಂಸ್ಥೆಯ ಪ್ರಿನ್ಸಿಪಾಲರು ಮತ್ತು ಆಡಳಿತ ಮಂಡಳಿಯವರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

<u>ಸೂಚನೆ:</u> ಶೇ.೮೦ರಡಿಯಲ್ಲಿ ಕರ್ನಾಟಕದ ಅಭ್ಯರ್ಥಿಗಳ ಮತ್ತು ಶೇ. ೨೦ರಡಿಯಲ್ಲಿ ಕರ್ನಾಟಕೇತರ ಅಭ್ಯರ್ಥಿಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ಪಟ್ಟಿಯನ್ನು ತಯಾರಿಸಿ ಸಂಬಂಧಿಸಿದ ದಾಖಲೆಗಳೊಂದಿಗೆ ನಿಗಧಿತ ಅವಧಿಯಲ್ಲಿ ಪ್ರವೇಶಾನುಮೋದನೆ ಪಡೆಯತಕ್ಕದ್ದು.

7. **<u>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೇ ಮೀಸಲಾತಿ ಗುಂಪಿನ ಅಭ್ಯರ್ಥಿಗಳ ಪ್ರವೇಶದ ಬಗ್ಗೆ ಸೂಚನೆಗಳು :-</u>**

1) ಸರ್ಕಾರದ ಆದೇಶ ಸಂಖ್ಯೆ: ಇಡಿ 114 ಟಿಪಿಇ 87 ದಿನಾಂಕ: 20/7/1987ರ ನಿಯಮ 5(2ಎ)ರಲ್ಲಿ ತಿಳಿಸಿರುವಂತೆ, ಕರ್ನಾಟಕ ಅಭ್ಯರ್ಥಿಗಳಿಗೆ ಮೀಸಲಾದ **ಶೇಕಡ ೮೦** ಸ್ಥಾನಗಳಲ್ಲಿ ಕನಿಷ್ಟ **ಶೇ.20**ರಷ್ಟು ಎಸ್.ಸಿ.ಯವರಿಗೂ, **ಶೇ.5**ರಷ್ಟು ಎಸ್.ಟಿ. ಅಭ್ಯರ್ಥಿಗಳಿಗೂ ಮೀಸಲಾಗಿರಿಸತಕ್ಕದ್ದು., ಈ ಮೀಸಲಾತಿಯ ಅಭ್ಯರ್ಥಿಗಳು ಸೂಕ್ತ ಸಂಖ್ಯೆಯಲ್ಲಿ ಬಾರದಿದ್ದಲ್ಲಿ ಅಷ್ಟು ಪ್ರಮಾಣದ ಸ್ಥಾನಗಳನ್ನು ಖಾಲಿ ಬಿಟ್ಟು ಉಳಿದ ಸ್ಥಾನಗಳನ್ನು ತುಂಬುವುದು. ನಂತರ ಈ ವಿಷಯದಲ್ಲಿ ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿ ಮುಂದಿನ ಕ್ರಮದ ಬಗ್ಗೆ ಅನುಮೋದನೆ ಪಡೆಯತಕ್ಕದ್ದು.
2) ಎಸ್.ಸಿ., ಎಸ್.ಟಿ. ಮತ್ತು ಪ್ರವರ್ಗ-1 ಹಾಗೂ ಗ್ರಾಮೀಣ ಗುಂಪಿನ ಸೌಲಭ್ಯಕ್ಕೆ ಕರ್ನಾಟಕ ಅಭ್ಯರ್ಥಿಗಳು ಮಾತ್ರ ಅರ್ಹರಾಗಿರುತ್ತಾರೆ.

<u>೮. ಅರ್ಹತಾ ಪತ್ರ:- **(Eligibility Certificate)**</u>

ಕರ್ನಾಟಕದಲ್ಲಿ ಸಿಬಿಎಸ್‌ಇ, ಐಸಿಎಸ್‌ಇ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದ ಅಭ್ಯರ್ಥಿ ಹಾಗೂ ಹೊರ ರಾಜ್ಯದಲ್ಲಿ ಎಸ್.ಎಲ್.ಎಲ್.ಸಿ: ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣನಾದ ಅಭ್ಯರ್ಥಿಯು ಡಿಪ್ಲೋಮಾ ಪ್ರವೇಶಕ್ಕೆ ಅರ್ಹತೆ ಇರುವ ಸಂಬಂಧದಲ್ಲಿ **ಕಾರ್ಯದರ್ಶಿಯವರು, ಕರ್ನಾಟಕ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಇವರು ನಿಗಧಿತ ಅವಧಿಯೊಳಗೆ ಅರ್ಹತಾ ಪತ್ರವನ್ನು ನೀಡಿರುವ ಬಗ್ಗೆ ಖಚಿತ ಪಡಿಸಿಕೊಂಡು ಪ್ರವೇಶ ನೀಡುವುದು**. ಅರ್ಹತಾ ಪತ್ರವಿಲ್ಲದ ಪ್ರವೇಶವನ್ನು ನಿಯಮಗಳ ಪ್ರಕಾರ ಪರಿಗಣಿಸಲಾಗುವುದಿಲ್ಲ.

**9. ಶುಲ್ಕ ನಿಗಧಿ ಬಗ್ಗೆ:-**

ಸರ್ಕಾರದ ಆದೇಶ ಸಂಖ್ಯೆ: ಇಡಿ 119 ಟಿಪಿಇ 05, ದಿನಾಂಕ: 18/10/2005ರನ್ವಯ ಹಾಗೂ ಇಡಿ 10 ಟಿಪಿಇ 2012, ದಿ:20-05-2012 ರಲ್ಲಿನಂತೆ ಈ ಕೆಳಕಂಡಂತೆ ಶುಲ್ಕ ನಿಗಧಿ ಆಗಿರುತ್ತದೆ. ಇದಲ್ಲದೆ ಯಾವುದೇ ಹೆಚ್ಚಿನ ಠೇವಣಿ ಅಥವಾ ಶುಲ್ಕವನ್ನು ವಸೂಲಿ ಮಾಡಿದ ಬಗ್ಗೆ ದೂರು ಬಂದಲ್ಲಿ ಅಂತಹ ಸಂಸ್ಥೆಯ ವಿರುದ್ಧ ನಿಯಮಗಳ ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುವುದು. ಶುಲ್ಕದ ವಿವರವನ್ನು ಕೆಳಗೆ ನಮೂದಿಸಲಾಗಿದೆ.

| **ಖಾಸಗಿ ಪಾಲಿಟೆಕ್ನಿಕ್‌ಗೆ ಅನ್ವಯವಾಗುವಂತೆ** | | **ಬೋಧನಾ ಶುಲ್ಕ** | **ಅಭಿವೃದ್ಧಿ ಶುಲ್ಕ** | **ಇತರೆ ಶುಲ್ಕ** | **ಒಟ್ಟು** |
|---|---|---|---|---|---|
| ಅ)ಕರ್ನಾಟಕದ ಅಭ್ಯರ್ಥಿಗಳಿಗೆ | - | 9,450/- | 500/- | 800/- | ₹ 10,750/- |
| ಆ)ಕರ್ನಾಟಕೇತರ ಅಭ್ಯರ್ಥಿಗಳಿಗೆ | - | 15,500/- | 500/- | 800/- | ₹ 16,800/- |

**10. ಪ್ರವೇಶಕ್ಕೆ ನಿಗಧಿಪಡಿಸಿರುವ ಅಂತಿಮ ದಿನಾಂಕ:-**

ರಾಜ್ಯದ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಡಿಪ್ಲೋಮಾ ಪಾರ್ಟ್ ಟೈಂ ಕೋರ್ಸಿಗೆ ದಿನಾಂಕ: **29-06-2013**ರ ವರೆಗೆ ಪ್ರವೇಶ ಮಾಡಿಕೊಳ್ಳುವ ಅವಕಾಶ ನೀಡಲಾಗಿದೆ. ಪ್ರಯುಕ್ತ, ಮೇಲ್ಕಂಡ ದಿನಾಂಕದೊಳಗೆ ಪ್ರವೇಶವನ್ನು ಪೂರೈಸುವ ವ್ಯವಸ್ಥೆ ಮಾಡಿಕೊಳ್ಳುವುದು.

ಉಲ್ಲೇಖ(1) ಮತ್ತು (2)ರಲ್ಲಿ ನಮೂದಿಸಿರುವ ಸರ್ಕಾರಿ ಆದೇಶದಲ್ಲಿ ತಿಳಿಸಿರುವ ಸೂಚನೆ/ನಿಯಮಗಳನ್ನು ಮತ್ತು ಇಲಾಖೆಯ ಸುತ್ತೋಲೆಯಲ್ಲಿ ತಿಳಿಸಿರುವ ಸಾಮಾನ್ಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಪ್ರವೇಶ ನೀಡತಕ್ಕದ್ದು. ನಿಯಮಗಳನ್ನು ಉಲ್ಲಂಘಿಸಿ ಪ್ರವೇಶ ಮಾಡಿದಂತಹ ಸಂದರ್ಭಗಳಿಗೆ ಆಯಾ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿ ಹಾಗೂ ಪ್ರಿನ್ಸಿಪಾಲರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

ಶೈಕ್ಷಣಿಕ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ನೀಡಲಾಗುವುದು. ಹಾಗೂ ಪಾಠಪ್ರವಚನಗಳನ್ನು ನಿಗಧಿಪಡಿಸಿದ ಅವಧಿಯ ಒಳಗೆ ಮುಗಿಸುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳತಕ್ಕದ್ದು.

**11. ಆಯ್ಕೆ ಪಟ್ಟಿ ಹಾಗೂ ದಾಖಲಾತಿಗಳನ್ನು ಸಲ್ಲಿಸುವ ಬಗ್ಗೆ:-**

2013-14ನೇ ಸಾಲಿನಲ್ಲಿ ಪ್ರವೇಶ ಹೊಂದಿದ ಅಭ್ಯರ್ಥಿಗಳ ಪ್ರವೇಶಾನುಮೋದನೆಗೆ ಸಂಬಂಧಿಸಿದಂತೆ ಪ್ರತ್ಯೇಕ ಸುತ್ತೋಲೆ ನೀಡಲಾಗುವುದು. ಸದರಿ ಮಾಹಿತಿಯನ್ನು ನಿಗಧಿತ ನಮೂನೆಯಲ್ಲೇ ಭರ್ತಿಮಾಡಿ ತ್ರಿಪ್ರತಿಯೊಂದಿಗೆ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಸೂಚಿಸುವ ದಾಖಲೆಗಳು ಮತ್ತು ಅಂತಿಮ ದಿನಾಂಕದ ಒಳಗೆ ಪ್ರವೇಶಾನುಮೋದನೆಗೆ ಸಲ್ಲಿಸತಕ್ಕದ್ದು.

**12. ಪ್ರವೇಶದ ಅಂಕಿ ಅಂಶಗಳನ್ನು ಸಲ್ಲಿಸುವ ಬಗ್ಗೆ:-**

2013-14ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶದ ಅಂಕಿ ಅಂಶಗಳನ್ನು ಪ್ರವೇಶ ಮುಗಿದ ಮೂರು ದಿನಗಳ ಒಳಗೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿ ಮಾಡಿ ತಪ್ಪದೇ ಕಳುಹಿಸಬೇಕೆಂದು ಸೂಚಿಸಲಾಗಿದೆ.

**13.** ಸರ್ಕಾರಿ ಆದೇಶ ಸಂಖ್ಯೆ: ಇಡಿ 195 ಟಿಪಿಇ 2003, ದಿನಾಂಕ: 7/6/2003 ರಲ್ಲಿ 2003-04ನೇ ಸಾಲಿನಿಂದ ಜಾರಿಗೆ ಬರುವಂತೆ ಎಲ್ಲಾ ಪಾಲಿಟೆಕ್ನಿಕ್‌ಗಳಿಗೆ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಿ ಆದೇಶಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಿಗಧಿತ ಅವಧಿಯೊಳಗೆ ಪ್ರವೇಶ ಮುಗಿಸಿ, ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಗಮನ ಹರಿಸಬೇಕೆಂದು ಹಾಗೂ ಸೆಮಿಸ್ಟರ್ ಪದ್ಧತಿಯ ಪ್ರಕಾರ ಶೈಕ್ಷಣಿಕ ವೇಳಾಪಟ್ಟಿಯನ್ನು ಕಡ್ಡಾಯವಾಗಿ ಅನುಸರಿಸಿ, ಪಾಠಪ್ರವಚನಗಳನ್ನು ಮುಗಿಸುವಲ್ಲಿ ಸಕಾಲಿಕ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ಕರ್ನಾಟಕದ ಆಡಳಿತ ಭಾಷೆ ಕನ್ನಡವಾಗಿರುವುದರಿಂದ, ಕನ್ನಡದಲ್ಲೇ ವ್ಯವಹರಿಸುವುದು ಎಲ್ಲಾ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರ ಜವಾಬ್ದಾರಿಯಾಗಿರುತ್ತದೆ. ಕನ್ನಡದಲ್ಲಿ ವ್ಯವಹರಿಸಿದ ಪತ್ರಗಳಿಗೆ ಹೆಚ್ಚಿನ ಆದ್ಯತೆ

ನೀಡಲಾಗುವುದು. ಎಲ್ಲಾ ಪತ್ರ ವ್ಯವಹಾರಗಳನ್ನು ಆಧ್ಯತೆಯ ಮೇರೆಗೆ ಕನ್ನಡದಲ್ಲೇ ಮಾಡುವುದಲ್ಲದೆ ಎಲ್ಲಾ ಪತ್ರಗಳ ಮೇಲೆ ***ಸುವರ್ಣ ಕರ್ನಾಟಕ*** ಎಂದು ನಮೂದಿಸುವುದು.

ಪಾಲಿಟೆಕ್ನಿಕ್‌ನ ಶೈಕ್ಷಣಿಕ ಗುಣಮಟ್ಟ ಹಾಗೂ ಪ್ರವೇಶದಲ್ಲಿ ವಿದ್ಯಾರ್ಥಿಗಳ ಆಕರ್ಷಣೆ ಮತ್ತು ಪ್ರವೇಶ/ಪರೀಕ್ಷೆಯಲ್ಲಿ ಪಾರದರ್ಶಕತೆಯನ್ನು ತರುವ ದೃಷ್ಟಿಯಿಂದ ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಡ್ಡಾಯವಾಗಿ ಅನುಸರಿಸಿ ಸಕಾಲಿಕ ಕ್ರಮ ತೆಗೆದುಕೊಳ್ಳುವುದು ಆಯಾ ಸಂಸ್ಥೆಯ ಪ್ರಿನ್ಸಿಪಾಲರ ಜವಾಬ್ದಾರಿಯಾಗಿರುತ್ತದೆ.

**ನಿರ್ದೇಶಕರು.**

**ಇವರಿಗೆ,**

1) ***ಪ್ರಿನ್ಸಿಪಾಲರು,*** ಆಕ್ಸ್‌ಫರ್ಡ್ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು.
2) ***ಪ್ರಿನ್ಸಿಪಾಲರು,*** ನಾಡಿಗಿರ್ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು.
3) ***ಪ್ರಿನ್ಸಿಪಾಲರು,*** ಪಿ.ಇ.ಎಸ್ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು.
4) ***ಪ್ರಿನ್ಸಿಪಾಲರು,*** ಸಂಜಯ್ ಗಾಂಧಿ (ಸಂಜೆ) ಪಾಲಿಟೆಕ್ನಿಕ್, ಬಳ್ಳಾರಿ.

**ಪ್ರತಿ:-**

1. ಕಾರ್ಯದರ್ಶಿಯವರು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು. – ದಿ: **29-06-2013**ರ ಒಳಗೆ ಹೊರರಾಜ್ಯದ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ವಿತರಿಸುವ ಬಗ್ಗೆ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳುವುದಲ್ಲದೆ ವಿದ್ಯಾರ್ಥಿಗಳ ಮಾಹಿತಿಗಾಗಿ ಪತ್ರಿಕಾ ಪ್ರಕಟಣೆಯನ್ನು ನೀಡುವಲ್ಲಿ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.
2. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ
4. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ.
5. ನಿರ್ದೇಶಕರವರ ಆಪ್ತ ಶಾಖೆಗೆ
6. ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು – ಸದರಿ ಪ್ರವೇಶಾಧಿಸೂಚನೆಯನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
7. ಆರ್.ಡಿ.ಎಂ(1) ರಿಂದ (14)ರ ವರೆಗಿನ ವಿಭಾಗಗಳಿಗೆ.
8. ಮೇಲ್ಕಂಡ ಅವಧಿಯ ಒಳಗೆ ಅರ್ಹತಾ ಪ್ರಮಾಣ ಪತ್ರ ನೀಡುವ ಸಂಬಂಧ ಕಛೇರಿ ವೇಳೆಯಲ್ಲಿ ಶುಲ್ಕವನ್ನು ಸ್ವೀಕರಿಸಿ ನಿಗಧಿತ ಲೆಕ್ಕ ಶೀರ್ಷಿಕೆಗೆ ಜಮಾ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಕೆಳಕಂಡ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ತಿಳಿಸಲಾಗಿದೆ.
   - ಪ್ರಿನ್ಸಿಪಾಲರು, ಸರ್ಕಾರಿ ತಾಂತ್ರಿಕ ಮುದ್ರಣ ಸಂಸ್ಥೆ, ಬೆಂಗಳೂರು – ಸೋಮವಾರ
   - ಸರ್ಕಾರಿ ಎಸ್.ಆರ್.ಸಿ. ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಬೆಂಗಳೂರು – ಮಂಗಳವಾರ & ಬುಧವಾರ.
   - ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು – ಗುರುವಾರ.
   - ಜಿಆರ್‌ಐಸಿಪಿ, ಬೆಂಗಳೂರು – ಶುಕ್ರವಾರ.
   - ಸರ್ಕಾರಿ ಜವಳಿ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು (ಐಟಿಟಿ) – ಶನಿವಾರ.
9. ಜ್ಞಾಪನ ಕಡತಕ್ಕೆ